ಓ.ಎಸ್.ನಂಃ 246/2024

ಪಿಡಬ್ಲ್ಯೂ-1

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 17.12.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ವಾದಿ ನನ್ನ ಎರಡನೇ ಮಗಳು. ಆಕೆ ವೈದ್ಯೆ ಆಗಿದ್ದಾಳೆ. ನನ್ನ ಮಗಳು ಗುಂಡ್ಲುಪೇಟೆಯಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಿದ್ದಾಳೆ. ದಾವ ಸ್ವತ್ತಿನಲ್ಲಿ ನನ್ನ ಮಗಳು ವೈದ್ಯಕೀಯ ವೃತ್ತಿ ಮಾಡುತ್ತಿದ್ದಾಳೆ. ಲೀಸ್ ಡೀಡ್ ನ್ನು ನಾನು ಓದಿದ್ದೇನೆ. ಸದರಿ ಲೀಸ್ ಡೀಡ್ ಕಲಂ.8 ರಲ್ಲಿ ನಡೆಸುವ ಉದ್ದಿಮೆಗೆ ಪುರಸಭೆಯ ನಿಯಾಮಾನುಸಾರ ಉದ್ದೀಮೆ ಪರವಾನಗೆ ಪಡೆಯಬೇಕು ಎಂಬ ಷರತ್ತು ಇದೆ ಎಂದರೆ ಸರಿ. ನಮ್ಮ ಪ್ರಕಾರ ನನ್ನ ಮಗಳು ನಡೆಸುವ ವೃತ್ತಿಗೆ ಅನುಮತಿ ಬೇಕಿಲ್ಲ. ಕೊಠಡಿ 11 ಮತ್ತ 12 ನ್ನು ನಾವು ಬಾಡಿಗೆ ಪಡೆದಿದ್ದೇವೆ. ಅದರ ಅವಧಿ 4 ವರ್ಷ 11 ತಿಂಗಳು. ದಿನಾಂಕಃ 28.02.2011 ಕ್ಕೆ ಕರಾರಿನಂತೆ ನಮ್ಮ ಬಾಡಿಗೆ ಅವಧಿ ಮುಗಿಯುತ್ತದೆ ಎಂದರೆ ಸರಿ. ಸದರಿ ಕರಾರಿನಲ್ಲಿ ಬಾಡಿಗೆ ಅವಧಿ ಮುಗಿದ ತಕ್ಷಣ ಸುಸ್ಥಿತಿಯಲ್ಲಿ ಯಾವುದೆ ತಕರಾರು ಮಾಡದೆ ಪ್ರತಿವಾದಿಯ ಸ್ವಾಧೀನಕ್ಕೆ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ಬಾಡಿಗೆ ಅವಧಿ ಮುಗಿದ ನಂತರ ಬರವಣಿಗೆಯಲ್ಲಿ ಪ್ರತಿವಾದಿಯ ಸ್ವಾಧೀನಕ್ಕೆ ದಾವ ಸ್ವತ್ತನ್ನು ಬಿಟ್ಟುಕೊಡುತ್ತೇವೆ ಎಂದು ನಾವು ಹೇಳಿಲ್ಲ.

ಪ್ರತಿ ತಿಂಗಳು 5ನೇ ತಾರೀಖಿನ ಒಳಗಾಗಿ ಪ್ರತಿವಾದಿಗೆ ಬಾಡಿಗೆ ಪಾವತಿ ಮಾಡಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿ ತನ್ನ ದಾಖಲೆಗಳನ್ನು ಪರಿಶೀಲಿಸಿ ಪ್ರತಿ ತಿಂಗಳು ಬಾಡಿಗೆ ಕಟ್ಟಿದ ಬಗ್ಗೆ ರಶೀದಿಗಳು ಇಲ್ಲ ಎಂದು ನುಡಿಯುತ್ತಾರೆ. ನನ್ನ ಬಳಿ ರಶೀದಿಗಳು ಇದೆ. ನನಗೆ ಗೊತ್ತಾಗದ ಕಾರಣ ರಶೀದಿಗಳನ್ನು ಹಾಜರುಪಡಿಸಿಲ್ಲ. ಸದರಿ ಕರಾರಿನಲ್ಲಿ ದಾವ ಸ್ವತ್ತನ್ನು ಒಳಬಾಡಿಗೆ ನೀಡಬಾರದು ಎಂಬ ಷರತ್ತು ಇದೆ ಎಂದರೆ ಸರಿ. ಡಾ. ಜಗದೀಶ್ ಎಂಬುವವರು ದಾವೆ ದಾಖಲಿಸುವ ವರೆಗೆ ಅಂದರೆ ಕಳೆದ 10 ವರ್ಷಗಳಿಂದ ವೈದ್ಯಕೀಯ ವೃತ್ತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿ ದಾವ ಸ್ವತ್ತಿನಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಮಳಿಗೆ ಸಂಖ್ಯೆ 10 ಮತ್ತು 11 ರ ನಡುವೆ ಇದ್ದ ಗೋಡೆಯನ್ನು

ನಾವು ತೆಗೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಗೋಡೆಯನ್ನು ಪರಿಶೀಲಿಸಲು ನ್ಯಾಯಾಲಯದ ನಿಯೋಗಿಯನ್ನು ನಿಯೋಜಿಸಬಹುದು. ವಾದಿ ದಾವ ಸ್ವತ್ತನ್ನು ಬಾಡಿಗೆ ಪಡೆದ ದಿನದಿಂದ ಇಂದಿನವರೆಗೂ ಯಾವುದೆ ವೈದ್ಯಕೀಯ ವೃತ್ತಿಯನ್ನು ದಾವ ಸ್ವತ್ತಿನಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

ಇಂದಿನ ವರೆಗೂ ಮಳಿಗೆ ಸಂಖ್ಯೆ: 11 ಕ್ಕೆ ಒಟ್ಟು ರೂ.2,10,211/- ಮತ್ತು ಮಳಿಗೆ ಸಂಖ್ಯೆ: 12 ಕ್ಕೆ ರೂ.2,16,289/- ಬಾಡಿಗೆಯನ್ನು ಬಾಕಿ ಉಳಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿಃ 24.09.2024 ರಂದು ಬಾಡಿಗೆ ಪಾವತಿಸುವಂತೆ ಪ್ರತಿವಾದಿ ನೋಟೀಸ್ ನೀಡಿದ್ದರು ಎಂದರೆ ಸಾಕ್ಷಿ ಅದಕ್ಕೆ ಉತ್ತರ ನೀಡಿದ್ದೇವೆ ಎಂದು ನುಡಿಯುತ್ತಾರೆ. ದಾವೆ ದಾಖಲಿಸಿದ ನಂತರ ಉಳಿದ ಬಾಡಿಗೆ ಹಣವನ್ನು ಪಾವತಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಅಧಿಕವಾಗಿ ಬಾಡಿಗೆ ಕಟ್ಟಿದ್ದೇವೆ ಎಂದು ನುಡಿಯುತ್ತಾರೆ. ಪುರಸಭೆ ಮಳಿಗೆಗಳು ಐ.ಡಿ.ಎಸ್.ಎಂ.ಟಿ ಯೋಜನೆಯಡಿ ನಿರ್ಮಿಸಲಾಗಿರುವ ಮಳಿಗೆಗಳು ಎಂದರೆ ಸರಿ. ಸದರಿ ಮಳಿಗೆಗಳ ಬಾಡಿಗೆ ಮತ್ತು ಹಂಚಿಕೆಯನ್ನು ಸದರಿ ಯೋಜನೆಯಡಿ ಮಾಡಬೇಕಾಗುತ್ತದೆ ಎಂದರೆ ಸರಿ. 2011 ರಲ್ಲಿ ಸದರಿ ಸ್ಕಿಮ್ ಅಡಿ ಬಾಡಿಗೆ ಪರಿಷ್ಕರಣೆಯಾಗಿದೆ ಎಂದು ಜಿಲ್ಲಾಧಿಕಾರಿಯವರ ಮುಂದೆ ನಾವು ಅರ್ಜಿ ಸಲ್ಲಿಸಿದ್ದೇವೆ ಎಂದರೆ  ನನಗೆ ಗೊತ್ತಿಲ್ಲ.

ಜಿಲ್ಲಾಧಿಕಾರಿಯವರು ನಮ್ಮ ಅರ್ಜಿಯನ್ನು ವಜಾಗೊಳಿಸಿ ಬಾಕಿ ಇರುವ ಬಾಡಿಗೆಯನ್ನು ವಸೂಲಿ ಮಾಡುವಂತೆ ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ನಿಪಿ9 ರ ಪ್ರಕಾರ ದಿಃ 21.08.2024 ರಂದು ತಿಳುವಳಿಕೆ ಪತ್ರವನ್ನು ನೀಡಲಾಗಿತ್ತು ಎಂದರೆ ಸರಿ. ನನ್ನ ಮಗಳು ವೈದ್ಯಾಳಾದ ಕಾರಣ ಆಕೆಗೆ ಕಾನೂನು ತಿಳುವಳಿಗೆ ಇದೆ ಎಂದರೆ ಸರಿ. ಮಾನ್ಯ ಜಿಲ್ಲಾಧಿಕಾರಿಯವರು ಬಾಡಿಗೆ ಪರಿಷ್ಕರಣದ ಆದೇಶದ ಬಗ್ಗೆ ನಾನು ವಿಚಾರಮಾಡಿದ್ದೇನೆ. ನಿಪಿ9 ನ್ನು ಸರ್ಕಾರದ ಐ.ಡಿ.ಎಸ್.ಎಂ.ಟಿ ಯೋಜನೆಯಡಿ ನೀಡಲಾಗಿದೆ ಎಂದರೆ ಇರಬಹುದು. 9 ರಿಂದ 12, 14 ಮತ್ತು 16 ರ ಮಳಿಗೆಗಳು ಮರು ಹರಾಜಾಗಿವೆ ಎಂದರೆ ಸರಿ. ಮಳಿಗೆ ಸಂಖ್ಯೆ: 11 ಉಮಾ.ಎಂ ಕೋಮ್ ನಾಗರಾಜು ಮತ್ತು ಮಳಿಗೆ ಸಂಖ್ಯೆ: 12 ಸುನಿಲ್ ಕುಮಾರ್ ಬಿನ್ ನಾಗೇಶ್ ಎಂಬುವವರಿಗೆ ಮರು ಹರಾಜಾಗಿವೆ ಎಂದರೆ ಸರಿ.

ಮಳಿಗೆ ಸಂಖ್ಯೆ 11 ಮಾಸಿಕ ಬಾಡಿಗೆ ರೂ.8,100 ಮತ್ತು ಮಳಿಗೆ ಸಂಖ್ಯೆ 12 ಮಾಸಿಕ ಬಾಡಿಗೆ ರೂ.9,100 ರಂತೆ ಮರು ಹರಜಾಗಿವೆ ಎಂದರೆ ನನಗೆ ಗೊತ್ತಿಲ್ಲ. ದಾವೆ ದಾಖಲಿಸುವ ಪೂರ್ವದಲ್ಲಿ ಡಾ.ಜಗದೀಶ್ ರವರು ದಾವ ಸ್ವತ್ತನ್ನು ಬಿಟ್ಟಿದ್ದರು ಎಂದರೆ ಮಾಹಿತಿ ಇಲ್ಲ. ದಾವೆ ದಾಖಲಿಸಿದ ದಿನದಿಂದ ಇಂದಿನವರೆಗೂ ನನ್ನ ಮಗಳು ದಾವ ಸ್ವತ್ತಿನ ಬಾಗಿಲು ತೆರೆದಿಲ್ಲ ಎಂದರೆ ಸರಿಯಲ್ಲ. ಅನಾಧಿಕೃತವಾಗಿ ಎರಡು ಮಳಿಗೆಯ ಪರಿಸ್ಕೃತ ಬಾಡಿಗೆ ಮೊತ್ತವನ್ನು ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಗೆ 6 ಲಕ್ಷಕ್ಕೂ ಅಧಿಕವಾಗಿ ನಷ್ಟವಾಗಿದೆ ಎಂದರೆ ಸರಿಯಲ್ಲ. ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಬಾಡಿಗೆಗೆ ಜಿ.ಎಸ್.ಟಿ ಮತ್ತು ಇತರ ವೆಚ್ಚವನ್ನು ಬರಿಸಬೇಕು ಎಂದರೆ ಸಾಕ್ಷಿ ನಾನೇ ಹೆಚ್ಚು ಬಾಡಿಗೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. 2006 ರಿಂದ ಇಂದಿನವರೆಗೂ ದಾವ ಸ್ವತ್ತನ್ನು ಒಳಬಾಡಿಗೆ ನೀಡಿ ಹೆಚ್ಚು ಹಣವನ್ನು ಸಂಪಾದನೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ವ್ಯಾಪಾರಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ದಿಃ 21.08.2024 ರಂದು ದೂರು ನೀಡಿದ್ದೇನೆ. ದೂರಿನ ಪ್ರತಿಯನ್ನು ಹಾಜರುಪಡಿಸಿಲ್ಲ. ವಾದ ಪತ್ರದಲ್ಲಿ ಮೌಖಿಕವಾಗಿ ದೂರು ನೀಡಿರುವುದಾಗಿ ಹೇಳಿದ್ದೇನೆ. ಅನಾಧಿಕೃತವಾಗಿ ದಾವ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವ ಪರಿಹಾರಕ್ಕೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ